ಶ್ರೀ ವಿ. ಎಂ. ದೇವ್.—ಈ ಪ್ರವಾಹದಿಂದ ಅನಾಹುತವಾಗದೆ ಇರುವಹಾಗೆ ಪರ್ಮನೆಂಟ್ ಮೆಜರ್ಸ್ ತೆಗೆದುಕೊಳ್ಳಲು ಸರ್ಕಾರದವರು ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೆ ಒಂದು ಮಾಸ್ಟರ್‌ಪ್ಲಾನ್ ಮಾಡಬೇಕೆಂದು ಇಂಡಿಯಾ ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ. ಇಂಡಿಯಾ ಸರ್ಕಾರದ ಇರಿಗೇಷನ್ ಮತ್ತು ಪವರ್ ಖಾತೆಯ ಮಂತ್ರಿಗಳು ಇವೊತ್ತು ಬೆಂಗಳೂರಿನಲ್ಲಿದ್ದಾರೆ. ಅವರು ರಾಮನಗರಕ್ಕೆ ಕೂಡ ಹೋಗಿ ಅಲ್ಲಿ ಪ್ರವಾಹದ ತೊಂದರೆಗೀಡಾಗಿರತಕ್ಕ ಪ್ರದೇಶಗಳನ್ನು ಸುಮಾರು ಒಂದು ಗಂಟೆಯುಕಾಲ ನೋಡಿಕೊಂಡು ಬಂದರು. ಈ ಪ್ರವಾಹದ ಹಾವಳಿಯಿಂದ ಉಂಟಾಗತಕ್ಕ ಅನಾಹುತಗಳನ್ನು ತಡೆಗಟ್ಟಲು ಏನೇನು ಯೋಜನೆಗಳು ಬೇಕೋ ಅವುಗಳನ್ನೆಲ್ಲಾ ಮಾಡಲು ಅವರು ಪ್ರಯತ್ನ ಮಾಡುತ್ತಾರೆ.

Sri B. V. MAGAVI.—Is it a fact that T. D. Boards have been entrusted with this work?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವುಮಟ್ಟಿಗೆ ಅವರೂ ಮಾಡುತ್ತಾರೆ.

Sri B. V. MAGAVI.—If so, are they supplied with adequate funds and personnel?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಆಫೀಸರನ್ನು ಅಪಾಯಿಂಟ್ ಮಾಡುವುದರಿಂದ he will do the Job in co-operation with T. D. Boards and local men.

1-30 P.M.

Sri G. DUGGAPPA.—May I know whether the Officer appointed worked at least for one month?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು join ಆಗಲಿಲ್ಲ.

Sri G. DUGGAPPA.—Have the Government made any arrangement to push through this work?

ಶ್ರೀ ಎಂ. ವಿ. ಕೃಷ್ಣಪ್ಪ.—ಇಂಥಾ ಕೆಲಸಗಳಲ್ಲಿ ಬಡಾ ಖಂಡಿತವಾಗಿ ಇಷ್ಟೇ ದಿವಸದಲ್ಲಿ ಕೆಲಸ ಮುಗಿಯುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಇಂಥವರು ಒಬ್ಬ ಆಫೀಸರು ಸಾಕು ಎಂದು ಪ್ರಾರಂಭದಲ್ಲಿ ಯೋಚನೆ ಮಾಡಿತ್ತು. ಆದರೆ ಕೆಲಸ ದೊಡ್ಡ ಪ್ರಮಾಣದಲ್ಲಿ ಆಗಬೇಕು, ಒಬ್ಬ ಆಫೀಸರನ್ನು ಹಾಕಿದರೆ ಮುಗಿಸಬಹುದೇ ಎಂದು ಯೋಚನೆ ಮಾಡುತ್ತಾ ಇರುವಾಗ ಅವರು ಇಲ್ಲದೇ ಇದ್ದರೂ ಪರವಾಗಿಲ್ಲ ಎಂದು ಸರ್ಕಾರದವರಿಗೆ ತಿಳಿದುಬಂತು. Because it was for three months and already one and half months was over. So the Gov rnmentthought that there was no need to appoint another Officer. ರೋಕರ್ ರಿಪೋರ್ಟ್ಸ್ ಬಂತು. S. D. O. ಮಾಡುವ ಕೆಲಸ ಅವರೂ ಮಾಡಬೇಕು. ಡೂಪ್ಲಿಕೇಟ್ ಆಗುತ್ತದೆ, ಆದ್ದರಿಂದ ಬೇಕಾಗಿಲ್ಲ ಎಂದು ಯೋಚನೆ ಮಾಡಿದೆವು We can entrust the responsibility to him. If he does not finish the work we can make him responsible ಎಂದು ವಿಚಾರ ಮಾಡುತ್ತಿರುವಾಗ ಮತ್ತೆ ಇವೆಲ್ಲಾ ನಿಧಾನವಾಗಿದೆ ಎಂದು ಚೀಫ್ ಮಿನಿಸ್ಟರ ಚೇಂಬರ್‌ನಲ್ಲಿ ಮೀಟಿಂಗ್ ನಡೆಸಿ ಒಬ್ಬ ಆಫೀಸರನ್ನು ಹಾಕಿದರೆ ಉತ್ತಮ ಎಂದು ತೀರ್ಮಾನಮಾಡಿ ಯಾರು ಈ ಕೆಲಸ ಮಾಡಬೇಕು ಎಂದು ಹೇಳಿ responsibility fix ಮಾಡಿದ್ದೇವೆ.

Starting of a Sugar Factory at M. K Hubli

* *Q*—728. Sri M. N. NAGHNOOR (Sampagaon II).—

Will the Government be pleased to state —

(*a*) since how long the proposal to start a Sugar Factory at M. K. Hubli is pending;

(*b*) the action they propose to take in this behalf?

A.—Sri K. MALLAPPA (Minister for Industries and Commerce).—

(*a*) 4- -1960.

(*b*) The case has been recommended to the Government of India, for grant of the requisite licence to the party for establishing a Sugar Factory at the place. The Government of India could not grant the licence due to surplus production of sugar in the country. However, the State Government will again press the Government of India to grant a licence.

Sri M. N. NAGHNOOR.—Has it come to the notice of the Government that the sugar cane growers in M. K. Hubli collected the sum of Rs. 210 lakhs and still are not aware as to when they are going to have a factory there?

† Sri K. MALLAPPA.—I know they have collected some money but I do not know how much they have collected.

Sri M. N. NAGHNOOR.—Is it not a fact that this matter has been pending for the last six years and that the former Chief Minister was pleased to advise them to collect money for starting a factory?

Sri K. MALLAPPA.—The matter has been pending since 4-5-1963

Sri G. DUGGAPPA.—May I know whether the State Government sent their recommendations in this behalf?

Sri K. MALLAPPA.—We sent our recommendations twice.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದು ಸಹಕಾರ ತತ್ವದಮೇಲೋ ಅಥವಾ ಜಾಯಿಂಟ್ ಸ್ಟಾಕ್ ಕಂಪನಿಯ ನಿಬಂಧನೆಗಳ ಮೇಲೋ?

ಶ್ರೀ ಕೆ. ಮಲ್ಲಪ್ಪ.—ಸಹಕಾರ ತತ್ವದಮೇಲೆ.

ಶ್ರೀ ಎಂ. ವಿ. ಶೆಟ್ಟಿ.—ಸರ್ಕಾರದವರಿಗೆ, ಪರದೇಶದಲ್ಲಿ ರಾಸಕ್ಕರೆಗೆ ಬೇಡಿಕೆ ಇದೆ. ಅದಕ್ಕೇ ಈ ಸೊಸೈಟಿಯವರಿಗೆ ರಾಸಕ್ಕರೆ ತಯಾರು ಮಾಡಲಕ್ಕೆ ಪರವಾನಗಿ ಕೊಡಲು ಶಕ್ಯವಿದೆಯೇ?

ಶ್ರೀ ಕೆ. ಮಲ್ಲಪ್ಪ.—ರಾ ಸಕ್ಕರೆ ಎಂದರೆ ಬೆಲ್ಲವೇ ಅಥವಾ ಬೂರಾ ಸಕ್ಕರೆಯೇ?

ಶ್ರೀ ಎಂ. ವಿ. ಶೆಟ್ಟಿ.—ಕ್ರಿಸ್ಟರ್ ಆಗದೇ ಇರುವ ಸಕ್ಕರೆಗೆ ಪರದೇಶದಲ್ಲಿ ಬೇಡಿಕೆ ಇದೆ.

ಶ್ರೀ ಕೆ. ಮಲ್ಲಪ್ಪ.—ಕ್ರಿಸ್ಟರ್ ಎಂದರೆ ಸಣ್ಣ ಸಕ್ಕರೆಯು ಕ್ರಿಸ್ಟಲ್ಲೇ. ಪರದೇಶದಲ್ಲಿ ಉಪಯೋಗಿಸುವುದು ದೊಡ್ಡ ಕ್ರಿಸ್ಟಲ್ ಎಂದು ಕೇಳಿದ್ದೇನೆ ಯಾವುದು ಡಿಮ್ಯಾಂಡ್ ನಲ್ಲಿದೆ ಎಂಬುದು ಗೊತ್ತಿಲ್ಲ. Anyway there was an agreement with Japan for exporting our sugar.

Sri ANNA RAO GANAMUKHI.—May I know whether the production of sugar became surplus after the recommendation was sent to the Central Govenment or whether the Government was aware that there was surplus?

Sri K. MALLAPPA.—Sugar production is in overproduction since about four or five years.

Sri ANNA RAO GANAMUKHI.—Is it possible for the Mysore Government to consider the desirability of protesting to the Central Government and state that the societies were formed and cases were recommended even before sugar became surplus?

Sri K. MALLAPPA —There is no use of protesting. Knowing the position is bad we are recommending the applications for licence.

Sri ANNA RAO GANAMUKHI.—Has it come to the notice of the Government that ordinary recommendations will not weigh with the Government of India and therefore those cases are pending with them?

Sri K. MALLAPPA.—They have assured us that when the position becomes easy, they will recommend the cases.

ಶ್ರೀ ಬಿ. ಎಲ್. ಗೌಡ.—ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ಸಹಕಾರ ತತ್ವದಮೇಲೆ 10 ಲಕ್ಷ ರೂಪಾಯಿಗಳನ್ನು ಜಮಾ ಮಾಡಿ ಇಂಥಾ ಕಾರ್ಖಾನೆ ಕೊಡಿಸಬೇಕೆಂದು ಕೇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಮಲ್ಲಪ್ಪ.—ಬಂದಿದೆ.

ಶ್ರೀಮತಿ ಬಸವರಾಜೇಶ್ವರಿ.—ಈಗಾಗಲೇ ಸಹಕಾರ ತತ್ವದಮೇಲೆ ಪ್ರಾರಂಭಮಾಡುತ್ತೇವೆ ಎಂದು ಹೇಳಿರುವ ಎಷ್ಟು ಅರ್ಜಿಗಳು ಸರ್ಕಾರದಲ್ಲಿ ಪೆಂಡಿಂಗ್ ಇವೆ?

ಶ್ರೀ ಕೆ. ಮಲ್ಲಪ್ಪ.—6-7 ಅರ್ಜಿಗಳು ಪೆಂಡಿಂಗ್ ಇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ಧಪ್ಪ.—ತಾವು ಸಂಚಾರ ಹೋದಾಗ ಸಹಕಾರ ತತ್ವದಮೇಲೆ ಷುಗರ್ ಕಂಪೆನಿ ಮಾಡಿ ಸಹಾಯ ಮಾಡುತ್ತೇವೆ ಎಂದು ವಾಗ್ದಾನ ಕೊಟ್ಟು ಜನರಿಗೆ ತೊಂದರೆ ಕೊಡುವುದಕ್ಕೆ ಬದಲಾಗಿ ಅದನ್ನು stunt ಮಾಡಬೇಡಿ, ಸೆಂಟ್ರಲ್ ಗವರ್ನ್‌ಮೆಂಟ್ ನವರು ಲೈಸನ್ಸ್ ಕೊಡುವುದಿಲ್ಲ ಎಂದು ತಾವೇ ನಾದರೂ advise ಮಾಡಿದ್ದೀರಾ?

ಶ್ರೀ ಕೆ. ಮಲ್ಲಪ್ಪ.—ಯಾರಿಗೂ ಸಹಕಾರ ತತ್ವದ ಮೇಲೆ ಸಕ್ಕರೆ ಕಂಪೆನಿ ಸ್ಥಾಪನೆ ಮಾಡಿ ಎಂದು ಪ್ರೋತ್ಸಾಹ ಕೊಟ್ಟಿಲ್ಲ. ಎಲ್ಲ ಜನರು ತಾವೇ ತಾವಾಗಿ ಬಂದು ಕೇಳಿದ್ದಾರೋ ಅಲ್ಲ ನಾವು ಪ್ರಯತ್ನ ಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದೇವೆ, ಅಷ್ಟೆ.

ಶ್ರೀ ಭೀಮಣ್ಣ.—6-7 ಕೇಸುಗಳು ಪೆಂಡಿಂಗ್ ಇವೆ ಎಂದು ಹೇಳಿದಿರಿ. ಬದರ್‌ನವರು ಕೇಳಿದ್ದಾರೆ; ಮತ್ತು ಇನ್ನೂ ಇತರರೂ ಕೇಳಿರಬಹುದು ಎಂದ ಮೇಲೆ ನೀವು ಪ್ರಯಾರಿಟಿ ಮೇಲೆ ಕೊಟ್ಟಿದ್ದೀರಾ?

ಶ್ರೀ ಕೆ ಮಲ್ಲಪ್ಪ.—ಬಹುಶಃ ಸದಸ್ಯರು ಬದರ್ ವಿಷಯ ಹೇಳಿದ್ದಾರೆ. ಬದರ್‌ಗೆ ಪ್ರಯಾರಿಟಿ ಕೊಟ್ಟಿದ್ದೇವೆ.

Sri GANJI VEERAPPA.—Is it a fact that the Government of India have assured the State Government that they are prepared to consider three cases?

Sri K. MALLAPPA.—They have not given any assurance to the effect that they are going to consider three cases. They have given an assurance to the effect that as soon as sugar position becomes easy, fresh applications would be considered.

ಶ್ರೀ ಬಿ. ಎಲ್. ಗೌಡ —ಷುಗರ್ ಪೊಸಿಷನ್ ease ಆಗಿ ಈ ಕಂಪೆನಿಗಳಿಗೆ ಲೈಸೆನ್ಸ್ ದೊರೆಯಲು ಎಷ್ಟು ದಿವಸ ಆಗಬಹುದು?

Sri K. MALLAPPA.—The situation is getting improved. The consumption is growing up and exports are also increasing. Shortly the position may be reviewed.

Sri M. N. NAGHNOOR.—In view of the fact that this is pending for long and in view of the fact that money has been collected to start a factory, will the Government give top priority to start a factory?

Sri K. MALLAPPA.—I have furnished answers. The case of M. K. Hubli will be pressed with the Government of India for immediate sanction.